

ಎಡದಿಂದ ಬಲಕ್ಕೆ:

1. ಕೆಂಪು ತಾವರೆಯನ್ನು ತಂದು ಕೊಟ್ಟದ್ದು ಭಾರೀ ಸಹಾಯವಾಯಿತು 4
3. ಸಾಹೇಬರ ವರ್ತನೆಯಿಂದ ಅವನಿಗೆ ಬಹಳ ಅಸಂತೋಷ 3
4. ಕಾಳಗದ ಸಾಮಗ್ರಿ ಮಾರಿ ಈ ಸಂಪಾದನೆ 3
6. ಅನ್ನ ದಾತನಿಗೆ ಕಷ್ಟವೋ ಕಷ್ಟ ಪ್ರತಿ ನಿತ್ಯ 4
8. ಆಕೆಗೆ ಸಿಕ್ಕ ಅವಕಾಶ ಮನ ಸೆಳೆಯುವಂತಿದೆ 4
10. ನೆಗೆದಾಡಿ, ಗಾಯನ ಮಾಡಿ ಎಲ್ಲರನೂ ನಗಿಸಿದ ವಿದೂಷಕ 4
12. ಸರಸ್ವತಿ, ಹೇಮಾವತಿಯರಂತೆಯೇ ಹೆಸರಿನ ಜೋಗದ ನದಿ 4
16. ವಾಣಿಜ್ಯ ಸಾಮಗ್ರಿಯೇ ಅಲ್ಲವೇ ಉಪ್ಪು ಕೂಡ 3
17. ಇಲಿಯನ್ನುಸಾಕಲು ಇಂಥ ಮನೆ ಬೇಕೇ? 3
18. ಆರೋಹಿಸಿದವರನ್ನು ಸನ್ಮಾನಿಸಲು ನೀಡಿದ್ದು ತಾವರೆ 4

ಮೇಲಿಂದ ಕೆಳಕ್ಕೆ:

1. ಎಲ್ಲರ ಗೌರವಕ್ಕೂ ಭಾಜನವಾದದ್ದು ಸರೀಸೃಪ 3
2. ಗೋಳಾಡುವವರ ಗುಂಪಿನಿಂದ ಸದಾ ಕಿರಿಕಿರಿ 3
3. ಯಾರಿಗೂ ಬಾಗದ ಬುದ್ಧಿಯಿಂದಾಗಿ ಈ ದುಃಖ, ಪರಿತಾಪ 3
5. ಕಂಡದ್ದಕ್ಕೆಲ್ಲ ಕೈ ಹಾಕಿ ಹಾಳುಮಾಡುವ ವ್ಯಕ್ತಿ 3
6. ಆತನಿಗೆ ಭೋಜನಕ್ಕೆ ಮುನ್ನ ದಿನವೂ ಎಣ್ಣೆ ಸ್ನಾನ 4
7. ಬನದ ಮೇಲಿನ ಬಾನಿನಲ್ಲಿ ಸಂಚರಿಸುವವ ದೇವತೆಯೇ ತಾನೆ? 4
8. ಕಂಡದ್ದೆಲ್ಲ ಬೇಕೆಂದು ಬಯಸಿದರೆ 'ಆಸೆಯ ಕುಣಿಕೆ ಹಗ್ಗ'ಕ್ಕೆ ಬಿದ್ದೀರಿ 4
9. ಮರ್ಕಟದಂತೆ ಕ್ಷಣದಲ್ಲೇ ರೂಪ ಬದಲಿಸುವ ಕೈ ಚಳಕ 4
11. ಗವಿಯಲ್ಲೂ ವಾಸಿಸುವ ಸಾಮರ್ಥ್ಯ ಇರುವವ ಹಳ್ಳಿಯವನು 3
13. ಯುದ್ಧ ವೀರರ ಅಗ್ರಪಂಕ್ತಿಯಲ್ಲಿದ್ದ ಮಹಾಭಾರತದ ಕರ್ಣ 3
14. ಸಭಾಂಗಣವನ್ನು ಪ್ರವೇಶಿಸಿದ ನೋಡಿ ಅಡುಗೆ ಮಾಡುವ ವ್ಯಕ್ತಿ 3
15. ಸ್ನೇಹ ಶುದ್ಧವಾಗಿದ್ದರೆ ಎಲ್ಲರೂ ಹತ್ತಿರ 3

---

## 04—03—2021 ಉತ್ತರಗಳು

ಎಡದಿಂದ ಬಲಕ್ಕೆ:

1. ನಿವೇಶನ 3. ನಿರ್ವರ್ಣ 4. ವಿಳಯ 6. ಯಜಮಾನ 7. ನಯನ 9. ಪ್ರತ್ಯಕ್ಷ 11. ಕೆಸರು 13. ಕಡಸು 15. ನೂರು ತಾಸು 17. ನೆನಪು 18. ಪುಕಾರು 19. ರಜಾಪತ್ರ

ಮೇಲಿಂದ ಕೆಳಕ್ಕೆ:

1. ನಿರ್ಣಯ 2. ನವೀನ 3. ನಿರ್ದಯ 5. ಯಜ್ಞಾಂತ್ಯ 7. ನಳಿಕೆ 8. ನವಿರು 9. ಪ್ರತ್ಯೇಕ 10. ಕ್ಷಮಿಸು 12. ಸಹನೆ 14. ಡಮರು 15. ನೂಪುರ 16. ಸುಪುತ್ರ

ಪ್ರಶ್ನಾಂಕಣ

# ಮೂವರು ಸೋದರಿಯರು: ಯಾರಿವರು?

ಅದೊಂದು ಅತ್ಯದ್ಭುತ ನಿಸರ್ಗ ನಿರ್ಮಿತಿ. ವಾಸ್ತವವಾಗಿ ಅದು ಪ್ರಕೃತಿಯ ಒಂದು ವಿಶ್ವ ಪ್ರಸಿದ್ಧ ಶಿಲಾ ಶಿಲ್ಪ. ಜಗತ್ತಿನಲ್ಲಿ ಅಲ್ಲಲ್ಲಿ ಮೈದಳೆದಿರುವ ಊಲ್ರಾ, ದೆವ್ವದ ಗೋಪುರ, ಹಡಗು ಬಂಡೆ, ದೆವ್ವದ ಸೋಪಾನ, ಆನೆ ಬಂಡೆ, ಬುರುಡೆ ಶಿಲೆ... ಇತ್ಯಾದಿ (ಚಿತ್ರ 2, 3 ) ಬೃಹತ್ ಬಂಡೆ ಶಿಲ್ಪಗಳ ಗುಂಪಿಗೇ 'ಮೂವರು ಸೋದರಿಯರು' (ಚಿತ್ರ1) ಕೂಡ ಸೇರಿದೆ.

ಮೂರು ಮಾನವಾಕೃತಿಗಳು ಒಟ್ಟಾಗಿ, ಒತ್ತಾಗಿ ನಿಂತಿರುವಂತೆ ಕಾಣುವ ಈ ದಿವ್ಯ ಶಿಲ್ಪ ಆಸ್ಟ್ರೇಲಿಯಾದಲ್ಲಿದೆ. ಆ ಭೂ ಖಂಡದ ಸುದೀರ್ಘ ಪರ್ವತ ಪಂಕ್ತಿ 'ದಿ ಗ್ರೇಟ್ ಡಿವೈಡಿಂಗ್ ರೇಂಜ್' ಸೇರಿದ 'ನೀಲಿ ಪರ್ವತ'ದ ಜಾಯಿಸನ್ ಕಣಿವೆಯ ಒಂದು ಪಾರ್ಶ್ವದಲ್ಲಿ ಪ್ರಕೃತಿ ಕಡೆದಿರುವ ಈ ಶಿಲ್ಪ ಕಣಿವೆಯಿಂದ ಸಮೀಪ 3000 ಅಡಿ ಉನ್ನತಿ ಮುಟ್ಟಿದೆ! ಆಸ್ಟ್ರೇಲಿಯಾದ ಮೂಲ ಬುಡಕಟ್ಟು ಜನರಾದ 'ಅಬಾರಿಜಿನಲ್'ಗಳ ಇತಿಹಾಸದಲ್ಲಿ ಇದೇ ಶಿಲ್ಪ ಕುರಿತ ಒಂದೆರಡು ಪ್ರಚಲಿತ, ಜನಜನಿತ ದಂತಕಥೆಗಳೂ ಇವೆ. ತಾವು ಪ್ರೀತಿಸಿದ್ದ ಅನ್ಯ ಬುಡಕಟ್ಟಿನ ಮೂವರು ಸೋದರರನ್ನು ಗುಟ್ಟಾಗಿ ವಿವಾಹವಾಗಲೆಂದು ತೆರಳಿದ ಮೂವರು ಸೋದರಿಯರು ಹೀಗೆ ಕಲ್ಲಾಗಿ ನಿಂತಿದ್ದಾರೆಂಬುದು ಆ ದಂತಕಥೆಗಳ ಪ್ರಧಾನ ಅಂಶ.

ವೈಜ್ಞಾನಿಕವಾಗಿ ಸ್ಪಷ್ಟವಾಗಿರುವಂತೆ ಈಗ್ಗೆ ಸುಮಾರು 300 ದಶಲಕ್ಷ ವರ್ಷಗಳ ಹಿಂದೆ ಪ್ರಸ್ತುತ ನೀಲಿ ಪರ್ವತ ಇರುವ ಇಡೀ ಪ್ರದೇಶ ತಗ್ಗಿನಲ್ಲಿದ್ದು ಸಂಪೂರ್ಣ ಸಾಗರ ಜಲದಿಂದ ಆವೃತವಾಗಿತ್ತು. ಅಲ್ಲಿಗೆ ಹಲವಾರು ನದಿಗಳು ಭಾರೀ ಪ್ರಮಾಣದ ಹೂಳನ್ನು (ಎಂದರೆ, ಕಲ್ಲು ಮಣ್ಣು ಮರಳು ಇತ್ಯಾದಿಗಳ ಮಿಶ್ರಣ) ಎಳೆದು ತಂದು ತುಂಬುತ್ತಿದ್ದುವು. ಅದೆಲ್ಲ ಹೂಳು ಕಡಲಿನ ತಳವನ್ನು ಸೇರಿ, ಅಲ್ಲಿ ಪದರ ಪದರವಾಗಿ ಹರಡಿಕೊಂಡು ಲಕ್ಷಾಂತರ ವರ್ಷಗಳ ಅವಧಿಯಲ್ಲಿ ಮರಳು ಶಿಲೆಯ ಸ್ತರಗಳಾದುವು.



ಈಗ್ಗೆ ಸಮೀಪ 200 ದಶಲಕ್ಷ ವರ್ಷ ಹಿಂದಿನ ಕಾಲದಲ್ಲಿ ಅದೇ ಪದರ ಶಿಲಾ ಸ್ತರಗಳ ತಳದಲ್ಲಿ ತೀವ್ರ ಸ್ವರೂಪದ ಜ್ವಾಲಾಮುಖಿ ಚಟುವಟಿಕೆಗಳು ಸಂಭವಿಸಿದುವು. ತತ್ಪರಿಣಾಮವಾಗಿ ಶಿಲಾ ಪದರಗಳು ಮೇಲಕ್ಕೆ ಎತ್ತಲ್ಪಟ್ಟು, ಕಡಲ ನೀರೆಲ್ಲ ಹಿಂಸರಿದು ಬೃಹತ್ ತಗ್ಗು ತಿಟ್ಟುಗಳು, ಪರ್ವತ ಕಣಿವೆ ಕಂದರಗಳು ರೂಪುಗೊಂಡುವು. ಅಂಥದೊಂದು ಕಣಿವೆಯ ಒಂದು ಅಂಚಿನ ಶಿಲಾ ರಾಶಿ ನಿಧಾನವಾಗಿ ಶಿಥಿಲೀಕರಣಗೊಂಡು, ಈಗ್ಗೆ ಕೆಲವು ಲಕ್ಷ ವರ್ಷಗಳ ಹಿಂದಿನ ವೇಳೆಗೆ 'ಮೂವರು ಸೋದರಿಯರು' ಶಿಲ್ಪ ಒಡಮೂಡಿತು.

ನಿಸರ್ಗ ರಮ್ಯ ಪ್ರದೇಶದಲ್ಲಿರುವ ಈ ಶಿಲ್ಪಕ್ಕೆ ಅಬಾರಿಜಿನಲ್ ಗಳ ಕಲ್ಪನೆಯಿಂದ ಬಂದದ್ದೇ ಈ ಹೆಸರು. ಪ್ರಸ್ತುತ 'ಮೂವರು ಸೋದರಿಯರು' ಬಂಡೆ ಶಿಲ್ಪ ಆಸ್ಟ್ರೇಲಿಯಾದ ಒಂದು ಬಹು ಮುಖ್ಯ ಪ್ರವಾಸೀ ಆಕರ್ಷಣೆ.

ಎನ್. ವಾಸುದೇವ್